ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ : ಕಾಶಿಇ/ಶೈವಿ/27/ಅಕಾನಿ-ಮಂಜೂರು/2021-22

ಕಾಲೇಜು ಶಿಕ್ಷಣ ಆಯುಕ್ತರ ಕಚೇರಿ
ಶೇಷಾದ್ರಿ ರಸ್ತೆ, ಬೆಂಗಳೂರು-560001.
ದಿನಾಂಕ : 31.05.2022.

**ಅಧಿಕೃತ ಜ್ಞಾಪನ**

ವಿಷಯ : ಅನ್ಯಕಾರ್ಯನಿಮಿತ್ತ ಮಂಜೂರು ಮಾಡುವ ಬಗ್ಗೆ

ಉಲ್ಲೇಖ : ಅಧ್ಯಕ್ಷರು, ಕರ್ನಾಟಕ ಚಿತ್ರಕಲಾ ಪರಿಷತ್ತು, ಬೆಂಗಳೂರು, ಇವರ ಪತ್ರಸಂಖ್ಯೆ : ಚಿಕಪ/2022-23, ದಿನಾಂಕ : 30.05.2022.

******

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಚಿತ್ರಕಲಾ ಪರಿಷತ್ತು, ಬೆಂಗಳೂರು, ಇವರು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿ, ಚಿತ್ರಕಲಾ ಮಹಾವಿದ್ಯಾಲಯದ ಇಕೋಕ್ಲಬ್ ಹಾಗೂ ಕೆ.ಪಿ ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನದ ಸಹಯೋಗದೊಂದಿಗೆ ಬೆಂಗಳೂರು ನಗರ ಪದವಿ ಕಾಲೇಜುಗಳ ಭಾಷಾ ಬೋಧಕರಿಗೆ ಪರಿಸರ ನಾಯಕತ್ವ ತರಬೇತಿ ಕಾರ್ಯಗಾರ **'ಪರಿಸರ ಮನನ 2022'** ಅನ್ನು ಆಯೋಜಿಸುತ್ತಿದ್ದು, ಎರಡು ಹಂತಗಳ ಈ ಕಾರ್ಯಗಾರವನ್ನು ವಿಶ್ವಸಂಸ್ಥೆಯು ಜೂನ್ ತಿಂಗಳನಲ್ಲಿ ನಿಗಧಿ ಪಡಿಸಿರುವ ಜಾಗತಿಕ 'ಪರಿಸರ ದಿನ', 'ಸಾಗರ ದಿನ', 'ಮರುಭೂಮಿ ನಿರೋಧಕ ದಿನ'ಗಳಿಗೆ ಪೂರಕವಾಗಿ ಜೂನ್ 09, 10, 11 ಹಾಗೂ 17,18,19 ರಂದು ಬೆಂಗಳೂರಿನ ಕರ್ನಾಟಕ ಚಿತ್ರಕಲಾ ಪರಿಷತ್ತು ಇಲ್ಲಿನ ಆವರಣದಲ್ಲಿ ಆಯೋಜಿಸುತ್ತಿದ್ದು, ಸದರಿ ಕಾರ್ಯಗಾರದಲ್ಲಿ ಭಾಗವಹಿಸುವ ಕನ್ನಡ ಮತ್ತು ಇಂಗ್ಲಿಷ್ ಭಾಷಾ ಬೋಧಕರಿಗೆ ಅನ್ಯಕಾರ್ಯ ನಿಮಿತ್ತ ರಜೆಯನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ.

ಈ ಸಂಬಂಧ, ಸದರಿ ಕಾರ್ಯಗಾರದಲ್ಲಿ ಭಾಗವಹಿಸುವ ಇಲಾಖಾ ವ್ಯಾಪ್ತಿಯ ಸರ್ಕಾರಿ ಮತ್ತು ಖಾಸಗಿ ಅನುದಾನಿತ ಪದವಿ ಕಾಲೇಜುಗಳ ಕನ್ನಡ ಮತ್ತು ಇಂಗ್ಲಿಷ್ ಭಾಷಾ ವಿಷಯದ ಅಧ್ಯಾಪಕರುಗಳು **(ಒಂದು ಸೆಮಿಸ್ಟರ್ ಅವಧಿಗೆ ಗರಿಷ್ಠ 4 ದಿನಗಳಿಗೆ ಮೀರದಂತೆ ಭಾಗವಹಿಸುವುದು)** ಕಾರ್ಯಗಾರದಲ್ಲಿ ಭಾಗವಹಿಸಿದ ಬಗ್ಗೆ ಹಾಜರಾತಿ ಪ್ರಮಾಣ ಪತ್ರವನ್ನು ಮೇಲಾಧಿಕಾರಿಗಳಿಗೆ ಒಪ್ಪಿಸುವ ನಿಬಂಧನೆಗೊಳಪಟ್ಟು ಸರ್ಕಾರದ/ಇಲಾಖೆಯ ವತಿಯಿಂದ ಯಾವುದೇ ಭತ್ಯೆಗಳಿಲ್ಲದೆ ಜೂನ್ 09, 10, 11 ಹಾಗೂ 17,18,19 ರಂದು ಅನ್ಯಕಾರ್ಯ ನಿಮಿತ್ತ ರಜೆಯನ್ನು ಮಂಜೂರು ಮಾಡಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ :

01. ಜಂಟಿ ನಿರ್ದೇಶಕರು, ಪ್ರಾದೇಶಿಕ ಕಚೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು – ಇವರಿಗೆ ಮಾಹಿತಿಗಾಗಿ.
02. ಅಧ್ಯಕ್ಷರು, ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರ ಕೃಪಾ ರಸ್ತೆ, ಬೆಂಗಳೂರು – 560001.
03. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕೇಂದ್ರ ಕಚೇರಿ, ಬೆಂಗಳೂರು (ವೆಬ್‌ಸೈಟ್‌ನಲ್ಲಿ ಅಳವಡಿಸಲು)
04. ಕಚೇರಿ ಪ್ರತಿ.

Scanned with CamScanner